# FDA - ಸಾಮಾನ್ಯ ಕನ್ನಡ - 1991

**ಸಮಯ : 2 ಗಂಟೆಗಳು** | **ಪ್ರಥಮ ಪತ್ರಿಕೆ** | **ಅಂಕಗಳು:150**

**ಸೂಚನೆ :** ಕೆಳಗಿನ ವಾಕ್ಯಗಳಲ್ಲಿ ಗೆರೆ ಹಾಕಿ ಸೂಚಿಸಿದ ಭಾಗ ತಪ್ಪಾಗಿದ್ದರೆ, ಮುಂದೆ ಕೊಡಲಾದ ಮೂರು ಪರ್ಯಾಯ ರೂಪಗಳಲ್ಲಿ ಸರಿಯಾಗಿರುವುದನ್ನು ಗುರುತಿಸಿ. ತಪ್ಪಿಲ್ಲದಿದ್ದರೆ (ತಪ್ಪಿಲ್ಲ)ಯನ್ನು ಗುರುತು ಮಾಡಿ.

1
ಹರಿಶ್ಚಂದ್ರ ನಗರದಲ್ಲಿ ಚತುರಣ್ಣನೆಂಬ ಶ್ರೀಮಂತ ವರ್ತಕನಿದ್ದನು. ಅವನು ಮನೆಯಲ್ಲಿ
2
ಬೆಲೆ ಬಾಳುವ ಗಡಿಯಾರವೊಂದು ಕಳುವಾಯಿತು. ಚತುರಣ್ಣನು ತನ್ನ ಮೂವರು ಸೇವಕರಲ್ಲಿ ಒಬ್ಬನು
3 4
ಕಳ್ಳತನ ಮಾಡಿರಬೇಕೆಂದು ಅನುಮಾನಿಸಿದನು. ಕಳ್ಳನನ್ನು ಕಂಡುಹಿಡಿಯಲು ಅವನು ಒಂದು
5 6
ಉಪಾಯವನ್ನು ಹೂಡಿದನು. ತನ್ನ ಖಾಸಾ ಕೊಠಡಿಗೆ ಮೂವರು ಸೇವಕರನ್ನೂ ಕರೆದನು. ಅವರಿಗೆ
7
ತಲಾ ಒಂದೊಂದು ಕಡ್ಡಿಯು ಕೊಡಲ್ಪಟ್ಟಿತು. ಆ ಮೂವರು ಕಡ್ಡಿಗಳೂ ಒಂದೇ ಅಳತೆಯಿಂದ ಕೂಡಿದ್ದವು. ಶ್ರೀಮಂತನು ಅವರನ್ನು ಕುರಿತು ನಿಮ್ಮ ಮೂವರಲ್ಲಿ ಯಾರೋ ಒಬ್ಬರು ನನ್ನ
8
ಗಡಿಯಾರವನ್ನು ಕದ್ದಿರುವಿರಿ. ನಿಮಗೆ ನಾನು ಕೊಟ್ಟಿರುವ ಕಡ್ಡಿಗಳು ವಿಶೇಷ ಗುಣದಿಂದ ಕೂಡಿವೆ.
9
ನಾಳೆ ಬೆಳಗಿನ ಹೊತ್ತಿಗೆ ಕದ್ದವರ ಬಳಿಯಿರುವ ಕಡ್ಡಿಯು ಒಂದು ಅಂಗುಲ ಉದ್ದವಾಗಿ ಬೆಳೆದಿರುತ್ತದೆ ಎಂದು.

ಮಾರನೆಯ ದಿನ ಆ ಮೂವರೂ ತಮ್ಮ ತಮ್ಮ ಕಡ್ಡಿಗಳ ಸಮೇತ ಹಾಜರಾದರು. ಒಬ್ಬನ ಬಳಿಯಲ್ಲಿನ ಕಡ್ಡಿ ಉಳಿದ ಒಬ್ಬರದಕ್ಕಿಂತ ಒಂದು ಅಂಗುಲ ಚಿಕ್ಕದಾಗಿತ್ತು. ಗಡಿಯಾರವನ್ನು ಕದ್ದಿದ್ದ
10
ಕಳ್ಳನು ತಾನು ಎಲ್ಲಿ ಸಿಕ್ಕಿ ಬೀಳುವೆನೋ ಎಂಬ ಹೆದರಿಕೆಯಿಂದ ಕಡ್ಡಿಯನ್ನು ಒಂದು ಅಂಗುಲ ಕತ್ತರಿಸಿದ್ದನು. ಹೀಗಾಗಿ ಕಳ್ಳನು ಸಿಕ್ಕಿಬಿದ್ದನು.

1. ಚತುರಣ್ಣ
   ಎ. ರೂಢನಾಮ ಬಿ. ಭಾವನಾಮ ಸಿ. ನಾಮವಿಶೇಷ ಡಿ. ಅಂಕಿತನಾಮ
2. ಮೂವರು
   ಎ. ಪರಿಮಾಣವಾಚಕ ಬಿ. ಸಂಖ್ಯಾವಾಚಕ ಸಿ. ಪ್ರಕಾರವಾಚಕ ಡಿ. ಸಂಖ್ಯೇಯವಾಚಕ
3. ಕಳ್ಳತನ
   ಎ. ತದ್ಧಿತಾಂತ ಭಾವನಾಮ ಬಿ. ಸಮಾಸಪದ ಸಿ. ಸಾಪೇಕ್ಷತ ಕ್ರಿಯಾಪದ ಡಿ. ಕೃದಂತಾವ್ಯಯ
4. ಕಂಡುಹಿಡಿಯಲು
   ಎ. ಪ್ರಯೋಜನ ಕ್ರಿಯಾರೂಪ ಬಿ. ಕರ್ಮಣಿ ಪ್ರಯೋಗ ಸಿ. ಕೃದಂತ ಭಾವನಾಮ ಡಿ. ದ್ವಿರುಕ್ತಿ
5. ಹೂಡಿದನು
   ಎ. ಭೂತಕಾಲ ಬಿ. ಅಪೂರ್ಣಭೂತಕಾಲ ಸಿ. ಭವಿಷ್ಯಕಾಲ ಡಿ. ವರ್ತಮಾನ ಕಾಲ

6. ಖಾಸಾ

ಎ. ದೇಶ್ಯ ಶಬ್ದ | ಬಿ. ತತ್ಸಮ ಶಬ್ದ | ಸಿ. ವಿರುದ್ಧಾರ್ಥಕ ಶಬ್ದ | ಡಿ. ಅನ್ಯದೇಶ್ಯ ಶಬ್ದ

7. ಕೊಡಲ್ಪಟ್ಟಿತು

ಎ. ಕರ್ಮಣಿ ಪ್ರಯೋಗ | ಬಿ. ಕರ್ತರಿ ಪ್ರಯೋಗ | ಸಿ. ಅಶುದ್ಧ ಪ್ರಯೋಗ | ಡಿ. ಉಪಮಾವಾಚಕ

8. ಕದ್ದಿರುವಿರಿ

ಎ. ಧಾತುರೂಪ | ಬಿ. ವಿಧ್ಯರ್ಥರೂಪ | ಸಿ. ಸಂಭಾವನಾ ರೂಪ | ಡಿ. ನಿಷೇಧರೂಪ

9. ಅಂಗುಲ

ಎ. ಏಕವಚನ | ಬಿ. ಬಹುವಚನ | ಸಿ. ದ್ವಿವಚನ | ಡಿ. ಗೌರವವಚನ

10. ತಾನು

ಎ. ಪುರುಷಾರ್ಥಕ ಸರ್ವನಾಮ | ಬಿ. ಪ್ರಶ್ನಾರ್ಥಕ ಸರ್ವನಾಮ

ಸಿ. ಅಂಕಿತ ನಾಮ | ಡಿ. ಆತ್ಮಾರ್ಥಕ ಸರ್ವನಾಮ

**ಸೂಚನೆ :** ಖಾಲಿ ಜಾಗದಲ್ಲಿರಬೇಕಾದ ಸೂಕ್ತ ಪದವನ್ನು ಗುರುತಿಸಿ.

ವಿಜ್ಞಾನವು ಭೂಮಿಯ 11 ನಿಜ ಸಂಗತಿಯನ್ನು ಕಂಡು ಹಿಡಿದಿದೆ. ಭೂಮಿ ಗುಂಡಾಗಿದೆಯ ಯಾವುದೂ ಅದನ್ನು 12 ನಿಂತಿಲ್ಲ. ಸೂರ್ಯನಿಗೆ ಇರುವ 13 ಭೂಮಿಯ ಸೂರ್ಯನನ್ನು ಸುತ್ತು ಹಾಕುತ್ತಿದೆ. ಎಂದು 14 ಮಾಡಿದೆ. ಒಟ್ಟಿನಲ್ಲಿ ವಿಜ್ಞಾನವು ಭೂಮಿಯ ಬಗ್ಗೆ ತಿಳಿಯದೆ ಇದ್ದ ಅನೇಕ ಸಂಗತಿಗಳನ್ನು ತಿಳಿಸಿ ತಪ್ಪಾಗಿ ತಿಳಿದಿದ್ದ ವಿಷಯಗಳನ್ನು 15.

11. ಎ. ಮೇಲ್ಮೈ ಲಕ್ಷಣದ | ಬಿ. ಅವಿವೇಕತೆಯ | ಸಿ. ಹುಟ್ಟು ಬೆಳವಣಿಗೆಯ | ಡಿ. ಧಾರಾಳತೆಯ

12. ಎ. ಓಡಿಸಿಕೊಂಡು | ಬಿ. ಹೊತ್ತುಕೊಂಡು | ಸಿ. ಹಾರಿಸಿಕೊಂಡು | ಡಿ. ಮಾರಿಕೊಂಡು

13. ತೇಜಶ್ಶಕ್ತಿಯಿಂದ | ಬಿ. ಕ್ಷುದ್ರಶಕ್ತಿಯಿಂದ | ಸಿ. ಪ್ರತಾಪ ಶಕ್ತಿಯಿಂದ | ಡಿ. ಆಕರ್ಷಣ ಶಕ್ತಿಯಿಂದ

14. ಎ. ಮನದಟ್ಟು | ಬಿ. ಮನಮುಟ್ಟು | ಸಿ. ಹದಗೆಟ್ಟು | ಡಿ. ಹುಡಿಗಟ್ಟು

15. ಎ. ಕಾಡುತ್ತದೆ | ಬಿ. ತಿದ್ದಿದೆ | ಸಿ. ನೋಡುತ್ತದೆ | ಡಿ. ಮಾಡುತ್ತದೆ

**ಸೂಚನೆ :** ಕೆಳಗಿನ ಸಾಹಿತ್ಯ ಖಂಡದಲ್ಲಿ ಆರು ವಾಕ್ಯಗಳಿವೆ. ಒಂದನೇ ಮತ್ತು ಆರನೇ ವಾಕ್ಯಗಳು ಸಕ್ರಮವಾಗಿದೆ. ಉಳಿದ P, Q, R, S ವಾಕ್ಯಗಳು ಸ್ಥಾನಪಲ್ಲಟವಾಗಿದೆ. ಅವುಗಳನ್ನು ಅರ್ಥಪೂರ್ಣವಾಗಿ ಜೋಡಿಸಿರುವ ಉತ್ತರವನ್ನು ಗುರುತಿಸಬೇಕು.

16. ಒಮ್ಮೆ ಅಕ್ಬರ್ ಬೀರಬಲ್ಲನನ್ನು ಮಾತಿನಲ್ಲಿ ಸೋಲಿಸಲು ನಿರ್ಧರಿಸಿದನು.

P. 'ಏನದು ಕನಸು' ಎಂದು ಬೀರಬಲ್ಲನು ಕೇಳಲು ನಾನು ಜೇನಿನ ಮಡುವಿನಲ್ಲೂ ಬಿದ್ದಿದ್ದೆ ಎಂದನು.

Q. ಆ ಕನಸಿನಲ್ಲಿ ನಾವಿಬ್ಬರೂ ಒಬ್ಬರನ್ನೊಬ್ಬರ ಮೈಯನ್ನು ನೆಕ್ಕುತ್ತಿದ್ದೆವು.

R. ಆದುದರಿಂದ ಬೀರಬಲ್ಲನನ್ನು ಕರೆಸಿ "ನಿನಗೆ ರಾತ್ರಿ ಕನಸನ್ನು ಹೇಳುವೆನು" ಕೇಳು ಎಂದನು.

S. ಆಗ ಬೀರಬಲ್ಲನು ನನಗೂ ನಿನ್ನೆ ರಾತ್ರಿ ಅದೇ ಕನಸು ಬಿದ್ದಿತು. ಅಕ್ಬರ್ ಬೀರಬಲ್ಲನ ಮಾತನ್ನು ಕೇಳಿ ತಲೆ ತಗ್ಗಿಸಿದನು.

ಎ. SRQP | ಬಿ. PSRQ | ಸಿ. RPSQ | ಡಿ. QSRP

17. ಕಾಡಿನಲ್ಲಿ ಒಂದು ಸಿಂಹ ಮಧ್ಯಾಹ್ನ ನಿದ್ರಿಸುತ್ತಿದ್ದಾಗ ಇಲಿಯೊಂದು ಅದರ ಮೇಲೆ ಓಡಾಡಿ ಅದಕ್ಕೆ ನಿದ್ರಾಭಂಗವಾಯಿತು.

P. ಮಾರನೆ ದಿನ ಬೇಟೆಗಾರನ ಬಲೆಯಲ್ಲಿ ಸಿಂಹವು ಸಿಲುಕಿಕೊಂಡು ಬಿಡಿಸಿಕೊಳ್ಳಲಾರದೆ ಘರ್ಜಿಸುತ್ತಿತ್ತು.

Q. "ನನ್ನ ನಿದ್ದೆ ಕೆಡಿಸಿದೆ, ಕೊಂದು ಬಿಡುವೆನು ನಿನ್ನನ್ನು" ಎಂದು ಇಲಿಯನ್ನು ಬೆದರಿಸಿತು.

R. ಆ ಘರ್ಜನೆ ಕೇಳಿ ಇಲಿಯು ಧಾವಿಸಿ ತನ್ನ ಹಲ್ಲುಗಳಿಂದ ಬಲೆಯನ್ನು ಕತ್ತರಿಸಿ ಸಿಂಹವನ್ನು ಬಿಡುಗಡೆ ಮಾಡಿತು.

S. ಇಲಿಯು ಪ್ರಾಣ ಭಿಕ್ಷೆ ಬೇಡಿದಾಗ ಸಿಂಹ ಕನಿಕರಿಸಿ ಬಿಟ್ಟು ಬಿಟ್ಟಿತು.

ಎ. RSPQ | ಬಿ. QSRP | ಸಿ. QPSR | ಡಿ. QSPR

**ಸೂಚನೆ : ಅರ್ಥಗ್ರಹಣ ಮಾಡಿ ಸೂಕ್ತ ಉತ್ತರ ಗುರುತಿಸಿ.**

ಹೋದವಾರ ಒಂದು ದಿನ ಹಗಲಿನಲ್ಲಿ ಆಯಾಸದಿಂದ ಮಲಗಿ ವಿಶ್ರಾಂತಿ ಪಡೆಯುತ್ತಿದ್ದೆನು. ಹಾಗೆಯೇ ಮಂಪರು ಆವರಿಸಿ ನಿದ್ರಾವಶನಾದೆನು. ಆಗ ಸುಂದರವಾದ ಹಗಲುಗನಸೊಂದು ಬಿತ್ತು. ಕನಸಿನಲ್ಲಿ ನಾನು ಪಟ್ಟ ಸುಖಕ್ಕೆ ಪಾರವೇ ಇರಲಿಲ್ಲ. ಆ ಕನಸಿನಲ್ಲಿ ನನಗೆ ಪ್ರಿಯನಾದ ವ್ಯಕ್ತಿಯೊಬ್ಬ ದೂರದಲ್ಲಿದ್ದು ಬಹಳ ಇಷ್ಟವಾದುದನ್ನು ತೋರಿಸುತ್ತೇನೆ ನೋಡು ಎಂದು ಕೈಯಲ್ಲಿ ವಿಚಿತ್ರಾಕಾರದ ವಸ್ತುವೊಂದನ್ನು ತೋರಿಸುತ್ತಿದ್ದನು. ದೂರದಲ್ಲಿದ್ದುದರಿಂದ ಅದನ್ನು ಸ್ಪಷ್ಟವಾಗಿ ನೋಡಲು ಕನ್ನಡಕ ಹಾಕಿಕೊಳ್ಳಬೇಕೆಂದು ದಢಾರನೆ ಎದ್ದು ಅರೆ! ಎಲ್ಲಿ ನನ್ನ ಕನ್ನಡಕ? ತಡವರಿಸುತ್ತಾ ಎದ್ದೆನು. ಅಲ್ಲಿಯೇ ಓದುತ್ತಾ ಕುಳಿತಿದ್ದ ನನ್ನ ಮೊಮ್ಮಗ ಇದೇನಜ್ಜ ! ಕನ್ನಡಕ ಹುಡುಕುತ್ತಿದ್ದೀಯೊ? ಎಂದನು. ಅರೆ! ಕನ್ನಡಕ ಹಾಕಿಕೊಂಡಿದ್ದರೂ ಆ ದೃಶ್ಯ, ಆ ವಸ್ತು ಏಕೆ ಚೆನ್ನಾಗಿ ಕಾಣಲಿಲ್ಲ? ಎಂದು ಚಿಂತಾಕ್ರಾಂತನಾದೆನು.

18. **ಒಂದು ದಿನ ಹಗಲಿನಲ್ಲಿ ನಿದ್ರಾಪರವಶನಾದೆನು**

ಎ. ಸುಂದರ ಕನಸುಗಳನ್ನು ಕಾಣಬೇಕು
ಬಿ. ದುಡಿಮೆಯಿಂದ ಆಯಾಸದ ಪರಿಹಾರವಾಗಬೇಕು
ಸಿ. ಮಾಡಬೇಕಾದ ಕೆಲಸಗಳಾವುವೂ ಇರಲಿಲ್ಲ
ಡಿ. ಮಲಗಿಕೊಳ್ಳಲು ಹಾಸಿಗೆ ಮತ್ತು ಜಾಗ ಪ್ರಶಸ್ತವಾಗಿತ್ತು

19. **ಕನಸಿನಲ್ಲಿ ಕಂಡು ಬಂದ ವ್ಯಕ್ತಿ**

ಎ. ನನ್ನ ಶತ್ರುವಾಗಿದ್ದನು
ಬಿ. ವಿದೇಶೀ ವ್ಯಕ್ತಿಯಾಗಿದ್ದು
ಸಿ. ಅಪರಿಚಿತ ವ್ಯಕ್ತಿಯಾಗಿದ್ದನು
ಡಿ. ನಾನು ಇಷ್ಟಪಡುವ ವ್ಯಕ್ತಿಯಾಗಿದ್ದನು

20. ವ್ಯಕ್ತಿ ತೋರಿಸುತ್ತಿದ್ದ ವಸ್ತು

ಎ. ಚೌಕಾಕಾರವಾಗಿತ್ತು
ಬಿ. ಸ್ವದೇಶದಲ್ಲಿ ತಯಾರಾಗಿತು
ಸಿ. ಬೆಲೆ ಬಾಳುವಂಥಹದ್ದಾಗಿತ್ತು
ಡಿ. ಆ ಆಕಾರದ ವಸ್ತುವನ್ನು ಹಿಂದೆ ನೋಡಿರಲಿಲ್ಲ

21. ವಸ್ತುವನ್ನು ಸ್ಪಷ್ಟವಾಗಿ ನೋಡಲು ಬಯಸಿ

ಎ. ಮೇಲೆದ್ದು ಪಕ್ಕದ ಕೋಣೆಗೆ ಧಾವಿಸಿದೆನು
ಬಿ. ನಿಧಾನವಾಗಿ ಕಣ್ಣು ಬಿಟ್ಟೆನು
ಸಿ. ಕನ್ನಡಕ ಹಾಕಿಕೊಂಡು ನೋಡಬಯಸಿದೆನು
ಡಿ. ವಸ್ತುವಿನ ಸಮೀಪಕ್ಕೆ ಹೋದೆನು

22. ಮೊಮ್ಮಗನು ಅಜ್ಜನನ್ನು ಕೇಳಿದ ಪ್ರಶ್ನೆ

ಎ. ಕತೆ ಹೇಳಲು ಬಂದೆಯಾ?
ಬಿ. ನನಗೆ ಸಿಹಿ ಕೊಡುವೆಯಾ
ಸಿ. ಅಜ್ಜಾ ಏನು ಯೋಚಿಸುತ್ತಿರುವೆ?
ಡಿ. ಕನ್ನಡಕವನ್ನು ಧರಿಸಿಯೇ ಹುಡುಕುತ್ತಿರುವೆಯೇನು?

**ಸೂಚನೆ :** ವಾಕ್ಯದಲ್ಲಿ ಪದಗಳು ಕ್ರಮಬದ್ಧವಾಗಿಲ್ಲ. ಅರ್ಥಬರುವಂತೆ ಜೋಡಿಸಬೇಕು.

ಉದಾ : ಇಲಿಯನ್ನು (P) ಹಿಡಿಯಿತು (Q) ಬೆಕ್ಕು (R) ಬಿಲದಲ್ಲಿರುವ (S)

ಎ. PQRS
ಬಿ. RSPQ
ಸಿ. QPRS
ಡಿ. SRQP

ಉತ್ತರ : ಬಿ

23. ನಾಯಿ (P) ಪ್ರಾರಂಭಿಸಿತು (Q) ಬೊಗುಳುವುದಕ್ಕೆ (R) ಕಳ್ಳನನ್ನು ಕಂಡು (S)

ಎ. PRSQ
ಬಿ. PSRQ
ಸಿ. RSPQ
ಡಿ. QRSP

24. ಹಾನಿಕರ (P) ಆರೋಗ್ಯಕ್ಕೆ (Q) ಸೇದುವುದು (R) ಸಿಗರೇಟು (S)

ಎ. SRQP
ಬಿ. QRPS
ಸಿ. SQRP
ಡಿ. RQSP

25. ಮುಂಚೆ (P) ಕುಲಾವಿ (Q) ಕೂಸು ಹುಟ್ಟುವುದಕ್ಕೆ (R) ಹೊಲಿಸಿದರು (S)

ಎ. QSPR
ಬಿ. SRPQ
ಸಿ. PQSR
ಡಿ. RPQS

26. ಗಂಟು ಕೈಯೊಳಗಿರುವ ಮೇಲು ಕನಸಿನ ಗಂಟಿಗಿಂತ
P Q R S
ಎ. PRQS ಬಿ. SPRQ ಸಿ. RPSQ ಡಿ. SQRP

27. ಅಭಿನಯಿಸಿದರು ಶಾಕುಂತಲ ನಾಟಕವನ್ನು ಹವ್ಯಾಸಿ ಕಲಾವಿದರು ಪುರಭವನದಲ್ಲಿ
P Q R S
ಎ. QRPS ಬಿ. RQSP ಸಿ. SRPQ ಡಿ. SQRP

28. ಎಲ್ಲಿ ಸೀಸದಕಡ್ಡಿ ನನ್ನ ಬಚ್ಚಿಟ್ಟಿದ್ದೀಯೆ?
P Q R S
ಎ. RSPQ ಬಿ. QRSP ಸಿ. RQPS ಡಿ. RPSQ

29. ಇಂಥ ಅನ್ಯಾವೂ ಛೇ, ಉಂಟೇ?
P Q R S
ಎ. PQSR ಬಿ. SRQP ಸಿ. QSRP ಡಿ. RPQS

30. ಒಳಗೆ ಇಲ್ಲದೆ ಪ್ರವೇಶವಿಲ್ಲ ಅಪ್ಪಣೆ?
P Q R S
ಎ. SRPQ ಬಿ. RPQS ಸಿ. SQPR ಡಿ. SPRQ

31. ಮುದ್ರಿಸಲಾಗಿದೆ ಮುದ್ರಣಾಲಯದಲ್ಲಿ ಜಯಮನೋಹರಿ ಪಠ್ಯಪುಸ್ತಕವನ್ನು
P Q R S
ಎ. SRQP ಬಿ. SQRP ಸಿ. PSQR ಡಿ. RSPQ

32. ನಮ್ಮಲ್ಲಿ ದೊರೆಯುತ್ತದೆ ಕಡಿಮೆ ಬೆಲೆಗೆ ಎಲ್ಲಾ ವಸ್ತುಗಳೂ
P Q R S
ಎ. PRQS ಬಿ. QRSP ಸಿ. RQSP ಡಿ. PSRQ

33. ಜನರು, ಕೂಚುಭಟ್ಟ ಯಾವಾಗಲೂ ಓದುತ್ತಾ ಕಾಲ ಕಳೆಯುವವನನ್ನು ಎನ್ನುತ್ತಾರೆ.
P Q R S
ಎ. QRSP ಬಿ. QPRS ಸಿ. SPQR ಡಿ. SQRP

34. ಭರತನು ರಾಮನನ್ನು ಪ್ರಾರ್ಥಿಸಿದರೂ ಮಾಡಬೇಕೆಂದು ರಾಜ್ಯಭಾರ ರಾಮನು ಒಪ್ಪಲಿಲ್ಲ
P Q R S
ಎ. PRSQ ಬಿ. QPRS ಸಿ. PSRQ ಡಿ. RQSP

35. ರಾಜನು ಹಿಡಿದು ದಂಗೆಯೆದ್ದ ಶಿಕ್ಷಿಸದೆ ಸೈನಿಕರನ್ನು ಸುಮ್ಮನೆ ಬಿಟ್ಟಿದ್ದೇಕೆ?
P Q R S
ಎ. RPSQ ಬಿ. QRPS ಸಿ. QSRP ಡಿ. SQRP

36. ಕುರುಡನು ಮನೆಯ ಬಳಿಯಿದ್ದ ದೊಡ್ಡ ಕಲ್ಲನ್ನು ಕಾಣದೆ ಭಿಕ್ಷೆಗಾಗಿ ಬರುತ್ತಿದ್ದಾಗ
P Q R
ಎಡವಿ ಬಿದ್ದನು
S
ಎ. SQRP ಬಿ. QPSR ಸಿ. SPQR ಡಿ. PSQR

37. ನಳನು ವಿಷದ ಕಾರ್ಕೋಟಕ ಕಚ್ಚಿದಾಗ ಅದರ ಭಯಂಕರ ಪ್ರಭಾವದಿಂದ
P Q R S
ಕುರೂಪಿಯಾದನು
ಎ. QSPR ಬಿ. QRPS ಸಿ. SPQR ಡಿ. PRSQ

**ಸೂಚನೆ : ಪ್ರಯೋಗ – ಅರ್ಥದೋಷವಿರುವ ತಪ್ಪು ಪದಗಳನ್ನು ಗುರುತಿಸಿ. ತಪ್ಪಿಲ್ಲದಿದ್ದರೆ (ಡಿ) ಯನ್ನು ಗುರುತಿಸಿ.**

38. ರೈತನು ನೇಗಿಲನ್ನು ಉಳುತ್ತಾನೆ. ತಪ್ಪಿಲ್ಲ
A B C D

39. ಭಾಟಾ ಮಾರ್ಗದಲ್ಲಿ ನಾಳೆ ಬಿದ್ದೆನು. ತಪ್ಪಿಲ್ಲ
A B C D

40. ಹರಿಶ್ಚಂದ್ರನು ಸತ್ಯವನ್ನೇ ಹೇಳಿದರು. ತಪ್ಪಿಲ್ಲ.
A B C D

41. ಲಘ್ನಪತ್ರಿಕೆ ನಿನ್ನೆ ಆಯಿತು ತಪ್ಪಿಲ್ಲ.
A B C D

42. ಅಗಸನು ಸೀತೆಯನ್ನು ನಿಂದಿಸಿದಳು. ತಪ್ಪಿಲ್ಲ.
A B C D

43. ಮರುಕುಟಿಗ ಮರವನ್ನು ಕುಟುಕಿತು. ತಪ್ಪಿಲ್ಲ
A B C D

44. ಸ್ವರಾಜ್ಯ ನನ್ನ ಹಕ್ಕು "ಎಂದು" ತಿಲಕರು ಸಾರಿದರು. ತಪ್ಪಿಲ್ಲ
A B C D

45. ಅಯ್ಯೋ, ಸಜ್ಜನರಿಗೆ ತೊಂದರೆಯಾಯಿತೇ? ತಪ್ಪಿಲ್ಲ
A B C D

46. ನಾಲ್ಕನೆಯ ಅಧ್ಯಾಯದ ತರುವಾಯ ಐದು ಅಧ್ಯಾಯ ಬರುತ್ತದೆ. ತಪ್ಪಿಲ್ಲ
A B C D

47. ನಾನು ಊಟ ಮಾಡುವೆನು. ತಪ್ಪಿಲ್ಲ
A B C D

**ಸೂಚನೆ : ಗೆರೆ ಎಳೆದ ಭಾಗವನ್ನು ಸುಧಾರಿಸಿ.**

ಉದಾ : ಪೂಜಾರಿಯು ದೇವರಿಗೆ ಪಂಚಾಮೃತ ಅಭಿಶೇಖ ಮಾಡಿದನು.

ಎ. ಅಭಿಶೇಕ ಬಿ. ಅಭಿಷೇಕ ಸಿ. ಅಭಿಷೇಖ ಡಿ. ಏನೂ ಸುಧಾರಣೆ ಇಲ್ಲ

ಗೆರೆ ಎಳೆದಿರುವ 'ಅಭಿಶೇಖ' ಶಬ್ದದ ಸರಿಯಾದ ಕಾಗುಣಿತ ಅಭಿಷೇಕ ಆದ್ದರಿಂದ ಖಚಿತ ಉತ್ತರ (ಬಿ)

48. ಯಾರವನು? ಎಂಬ ಪದ ಅವಧರಣಾರ್ಥಕ ಪದವಾಗಿದೆ.

ಎ. ಆಶ್ಚರ್ಯ ಸೂಚಕ ಪದವಾಗಿದೆ ಬಿ. ನಿಷೇಧಾರ್ಥಕ ಪದ

ಸಿ. ಪ್ರಶ್ನಾರ್ಥಕ ಪದ ಡಿ. ಏನೂ ಸುಧಾರಣೆ ಇಲ್ಲ

49. ಉಮಾ ನಿನ್ನೆ ನಾಟಕಕ್ಕೆ ಹೋಗುವಳು

ಎ. ಹೋಗುವಳು ಬಿ. ಹೋಗಿದ್ದಳು ಸಿ. ಹೋಗುತ್ತಾಳೆ ಡಿ. ಏನೂ ಸುಧಾರಣೆ ಇಲ್ಲ

50. ತಾಯಿ ಮಗಳನ್ನು ಸಂತೈಸಿದಳು.

ಎ. ಸಂತೈಸಿತು ಬಿ. ಸಂತೈಸಿದ್ದರು ಸಿ. ಸಂತೈಸಿದ್ದಿತು ಡಿ. ಏನೂ ಸುಧಾರಣೆ ಇಲ್ಲ

51. ಜಿಂಕೆಯೂ ಶಕುಂತಲೆಯೂ ಹೊಳೆಗೆ ಹೋದಳು

ಎ. ಹೋಯಿತು ಬಿ. ಹೋದರು ಸಿ. ಹೋದವು ಡಿ. ಏನೂ ಸುಧಾರಣೆ ಇಲ್ಲ

52. ಕುಣಿಯಲಾರದ ನರ್ತಕಿ ನೆಲ ಡೊಂಕೆಂದಳು

ಎ. ಡೊಂಕೆಂದಿತು ಬಿ. ಡೊಂಕೆಂದಾಳು ಸಿ. ಡೊಂಕೆಂದನು ಡಿ. ಏನೂ ಸುಧಾರಣೆ ಇಲ್ಲ

53. ಸರ್ ಎಂ. ವಿಸ್ವೇಷ್ವರಯ್ಯ ಮೈಸೂರಿನ ದಿವಾನರಾಗಿದ್ದರು.

ಎ. ವಿಷ್ವೇಷ್ವರಯ್ಯ ಬಿ. ವಿಸ್ವೇಷ್ವರಯಂ ಸಿ. ವಿಶ್ವೇಶ್ವರಯ್ಯ ಡಿ. ಏನೂ ಸುಧಾರಣೆ ಇಲ್ಲ

54. ಧನಧಾನ್ಯ ಎಂಬ ಪದ ಅಂಶಿ ಸಮಾಸವಾಗಿದೆ

ಎ. ಬಹುವ್ರಿಹಿ ಸಮಾಸ ಬಿ. ದ್ವಿಗು ಸಮಾಸ ಸಿ. ದ್ವಂದ್ವ ಸಮಾಸ ಡಿ. ಏನೂ ಸುಧಾರಣೆ ಇಲ್ಲ

55. ಸ್ತ್ರೀಯರು ಎಂಬುದು ಲೋಪಸಂಧಿ

ಎ. ವಕಾರಾಗಮ ಸಂಧಿ ಬಿ. ಯಕಾರಾಗಮ ಸಂಧಿ ಸಿ. ಆದೇಶ ಸಂಧಿ ಡಿ. ಏನೂ ಸುಧಾರಣೆ ಇಲ್ಲ

56. ಕಣ್ಣುಗ್ರುಡ ಸಮಾನಪದದ ವಿಗ್ರಹವಾಕ್ಯ ಕಣ್ಣೆ + ಕುರುಡು

ಎ. ಕಣ್ಣೊಳಗೆ + ಕುರುಡ ಬಿ. ಕಣ್ಣನ್ನು + ಕುರುಡ ಸಿ. ಕಣ್ಣಿಂದ + ಕುರುಡ ಡಿ. ಏನೂ ಸುಧಾರಣೆ ಇಲ್ಲ

57. ಆಗಸ ಎಂಬ ಪದದ ಸ್ತ್ರೀಲಿಂಗ ಅಗಸೆ

ಎ. ಅಗಸಗಾರೆ ಬಿ. ಅಗಸಗಿತ್ತಿ ಸಿ. ಅಗಸಮ್ಮಳು ಡಿ. ಏನೂ ಸುಧಾರಣೆ ಇಲ್ಲ